ಕಥೆ



ಸ.ರಘುನಾಥ

ಕಲೆ: ವಿಶ್ವನಾಥ್ ಎ.ಎಸ್.

# ಕರುಳಗೀತೆ

ಹಂದಿ ಆರು ಮರಿ ಹಾಕಿತು. ಅದು ಯಾರಿಗೂ ಸುದ್ದಿಯಲ್ಲ. ಸಾಕಿದವನಿಗಷ್ಟೇ ಅದು ಸುದ್ದಿ. ಅವನಲ್ಲೊಂದು ಲೆಕ್ಕಾಚಾರವಿತ್ತು, ಅದರಿಂದಾಗುವ ಲಾಭ. ತಾಯಿಹಂದಿಯಲ್ಲಿ ಈ ಲೆಕ್ಕಾಚಾರವಿರಲಿಲ್ಲ. ಹಾಗೆಂದುಕೊಂಡೆ ನಾನು. ಮನುಷ್ಯನಾದುದರಿಂದ ಮನುಷ್ಯನಲ್ಲಿನ ಲೆಕ್ಕಾಚಾರಗಳನ್ನು ಸರಿಯೋ ತಪ್ಪೋ ಅಂದಾಜಿಸಬಲ್ಲೆ ಅಂದುಕೊಂಡೆ. ಹಾಗೆಯೇ ಹಂದಿಗೆ ಹಂದಿಯ ಲೆಕ್ಕಾಚಾರದ ಅಂದಾಜು ಬಂದೀತೆ? ಗೊತ್ತಿಲ್ಲ. ನನಗೆ ಗೊತ್ತಾಗಬೇಕೆಂದರೆ ಅದರ ಭಾಷೆ, ಅಂಕಿ- ಸಂಖ್ಯೆಗಳನ್ನು ನಾನು ಕಲಿತು ತಿಳಿದಿರಬೇಕು. ಇದನ್ನು ಕಲಿಸುವ ಶಾಲೆ, ಕಾಲೇಜು, ವಿಶ್ವವಿದ್ಯಾಲಯ ನರಲೋಕದಲ್ಲೆಲ್ಲಿಯೂ ಇದ್ದಿರಲಾರದು. ಹಾಗಾಗಿ ಕಲಿಯಲಾಗದ ನಿರಾಸೆಗೆ ಸಿಲುಕಿದೆ. ಹೀರುವಾಗ ಬೀದಿಯಲ್ಲಿ ಯಾರೋ ಯಾರನ್ನೋ 'ಹೋಗಲೇ ಹಂದಿ' ಎಂದು ಬೈದುದು ಕೇಳಿಸಿತು. ಹಂದಿ ಹಂದಿಯನ್ನು ಬೈಯ್ಯುವುದಾದರೆ 'ಹೋಗಲೇ ಮನುಷ್ಯ' ಎಂದು ಬೈಯ್ಯುವುದೇ? ಬೈದರೆ ನನಗರ್ಥವಾಗುವುದು ಹೇಗೆ? ನನ್ನನ್ನು ಹಂದಿಯೆಂದರೆ ಅವಮಾನವಾಗುವಂತೆ, ಸಿಟ್ಟು ಬರುವಂತೆ ಹಂದಿಗೂ ಅವಮಾನವಾಗುವುದೇ, ಬರುವುದೇ ಸಿಟ್ಟು? ತಿಳಿಯದಲ್ಲ. ಇತರರನ್ನು ಕೇಳುವ ಬದಲು ನನ್ನನ್ನೇ ಕೇಳಿಕೊಂಡೆ. ಆದ ಪ್ರಯೋಜನವೇನೂ ಇರಲಿಲ್ಲ.

ಹಂದಿ ನನ್ನ ಮನದೊಳಗಿತ್ತು. ಹಂದಿಯಾಗಿಯೇ ಇತ್ತು. ಅದಕ್ಕೂ ನನಗೂ ರೂಪಾಂತರ ಸಾಧ್ಯವಿರಲಿಲ್ಲ. ನನ್ನಲ್ಲಿ ಹಂದಿಯಿರುವ ಹಾಗೆ ಅದರಲ್ಲಿ ನಾನು ಎಂದರೆ ಮನುಷ್ಯನಿರುವನೆ? ಇದ್ದರೆ ಮನುಷ್ಯನ ರೂಪ ಮಾತ್ರ ಇರಲು ಸಾಧ್ಯವಿರದು. ಮನುಷ್ಯನ ಮನಸ್ಸಿನಲ್ಲಷ್ಟೇ ಯಾವುದೇ ಪ್ರಾಣಿ ಇರಬಲ್ಲದು. ಇದೆಲ್ಲ ಇರಲತ್ತ. ನಾನು ಹಂದಿಯಾಗಬೇಕು, ಅದರಲ್ಲಿ ಮನುಷ್ಯ, ಅವನ ಕುರಿತ ಭಾವನೆ ಏನೇನೆಂದು ತಿಳಿಯಬೇಕು. ಹೇಗೆ?

ಎಲ್ಲ ಜೀವಿಗಳಿಗೂ ಮನಸ್ಸಿರುತ್ತದೆ ಅನ್ನುವುದು ತಿಳಿಯಬೇಕಿದ್ದ ವಯಸ್ಸಿನಲ್ಲಿ ತಿಳಿದುಕೊಂಡಿದ್ದೆ. ಮನಸ್ಸು ಹೇಗಿರುತ್ತದೆ, ವಸ್ತುವೇ ಅದು, ಅವಸ್ತುವೇ? ತತ್ವ, ಅಧ್ಯಾತ್ಮ ವಿಚಾರ. ಭಗವದ್ಗೀತೆ ಓದು, ಅರ್ಥಮಾಡಿಕೊ ಎಂಬುವುದು ಸಾಮಾನ್ಯ ಉಪದೇಶ, ಸಲಹೆ. ಒಂದು ಪಂಥದ ಉಪದೇಶ ಸಭೆಯಲ್ಲಿ ಹೇಳುತ್ತಿದ್ದರು, 'ಈ ಜನ್ಮದಲ್ಲಿ ಯಾರು, ಯಾವುದು ಏನೋ ಮರುಜನ್ಮದಲ್ಲಿ ಅದೇ ಆಗಿ ಜನಿಸುವುದು...' ಹಾಗೆಯೇ ಆದರೆ ನಾನೀಗ ಮನುಷ್ಯ ಜನ್ಮದಲ್ಲಿದ್ದೇನೆ. ಮರುಜನ್ಮದಲ್ಲಿ ಮನುಷ್ಯನಾಗಿಯೇ ಹುಟ್ಟುತ್ತೇನೆ. ಬಯಸಿದರೂ ಹಂದಿಯಾಗಿ ಹುಟ್ಟಲಾರೆ. ಇನ್ನಾರದೋ ಬೋಧನಾಮೃತ, 'ಈ ಜನ್ಮದಲ್ಲಿ ಘೋರಪಾಪಗಳನ್ನು ಮಾಡಿದರೆ...' ಅಂದರೆ ನಾನು ಹಂದಿ ಜನ್ಮಕ್ಕಾಗಿ ಘೋರ ಪಾಪಗಳನ್ನು ಮಾಡಬೇಕು. ಮಾಡಬಹುದು. ಆದರೆ ನನಗೆ ಜನ್ಮಾಂತರಗಳ ನಂಬಿಕೆಯಿಲ್ಲ. ನಾನು ಹಂದಿಯಾಗಿ ಹುಟ್ಟುವುದಿಲ್ಲ.